## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ಮಂಡಿಸಿರುವ ನಿಯಮ 330ಕ್ಕೆ ಉತ್ತರ

ಪ್ರಶ್ನೆ:ವೈದ್ಯಕೀಯ ಶಿಕ್ಷಣ ಇಲಾಖೆಯಡಿ ರಾಜೀವಗಾಂಧಿ ವಿಶ್ವವಿದ್ಯಾಲಯಗಳ ಅಧೀನದಲ್ಲಿ ಬರುವ ಎಲ್ಲಾ ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಂದ ನಿಗದಿತ ಟ್ಯೂಷನ್ ಶುಲ್ಕಕ್ಕಿಂತ ಹೆಚ್ಚಿಗೆ ಪಡೆಯುತ್ತಿದ್ದು (ನರ್ಸಿಂಗ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳಲ್ಲಿ ಅತಿ ಹೆಚ್ಚಿಗೆ) ಹಾಗೂ ವಿದ್ಯಾರ್ಥಿನಿಲಯಗಳ ಶುಲ್ಕಗಳು ಏಕರೂಪವಾಗಿರದೆ ಇದ್ದು, ಒಂದೊಂದು ಕಾಲೇಜುಗಳಲ್ಲಿ ಒಂದೊಂದು ರೀತಿಯಲ್ಲಿ ಶುಲ್ಕಗಳನ್ನು ವಿಧಿಸಿ, ಕಡ್ಡಾಯವಾಗಿ ವಿದ್ಯಾರ್ಥಿನಿಲಯಗಳಲ್ಲಿ ಇರಬೇಕೆಂಬ ಷರತ್ತು ವಿಧಿಸುತ್ತಿರುವುರಿಂದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆ ಉಂಟಾಗುತ್ತಿರುವ ಗಂಭೀರ ಸಮಸ್ಯೆ ಕುರಿತು.

******

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 301 ಎಂಎಸ್ಎಫ್ 2023, ದಿನಾಂಕ:28.07.2023ರ ಆದೇಶದಲ್ಲಿ 2023-24ನೇ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ ಮತ್ತು ಖಾಸಗಿ ನರ್ಸಿಂಗ್ ಕಾಲೇಜುಗಳಲ್ಲಿನ ಬಿ.ಎಸ್ಸಿ ನರ್ಸಿಂಗ್ ಕೋರ್ಸ್‌ಗಳ ಪ್ರವೇಶಾತಿಗೆ ಊಟ, ವಸತಿ ಸೌಲಭ್ಯ (ಹಾಸ್ಟಲ್) ಮತ್ತು ಸಮವಸ್ತ್ರ, ಹಾಗೂ ಇತರೆ ವೆಚ್ಚವನ್ನು ಹೊರತು ಪಡಿಸಿ ಬೋಧನಾ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

| Category | Government Quota in Govt Colleges 100% | Govt Quota in Private Colleges 20% | Management Quota in Private Colleges 80% | |
|---|---|---|---|---|
| | | | Domicile of Karnataka Candidates | Other than Karnataka Candidates |
| Fee | Rs.10.000/- per Year | Rs.10.000/- per Year | Rs.1,00,000/- per Year | Rs.1,40,000/- per Year |

ಮೇಲ್ಕಂಡ ಬೋಧನಾ ಶುಲ್ಕವನ್ನು ಸರ್ಕಾರವು Karnataka state Association of the Management of Nursing and Allied Health Science Institutions(Regd) ನೊಂದಿಗೆ ಪರಸ್ಪರ ಒಪ್ಪಂದದ ಒಡಂಬಡಿಕೆ ಆಧಾರದ ಮೇಲೆ ನಿಗಧಿಪಡಿಸಿರುವುದರಿಂದ ನಿಗಧಿತ ಬೋಧನಾ ಶುಲ್ಕಕ್ಕಿಂತ ಹೆಚ್ಚಿನ ಬೋಧನಾ ಶುಲ್ಕವನ್ನು ವಿದಿಸಲು ಅವಕಾಶವಿರುವುದಿಲ್ಲ.

ಅದೇ ರೀತಿ ಅಲೈಡ್ ಮತ್ತು ಇತರೆ ಕೋರ್ಸುಗಳ ಸಂಬಂಧ ಸರ್ಕಾರವು ಬೋಧನಾ ಶುಲ್ಕವನ್ನು ನಿಗಧಿಪಡಿಸಿ, ಆದೇಶಿಸಿರುತ್ತದೆ. ನಿಗಧಿತ ಬೋಧನಾ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ಸಂಸ್ಥೆಗಳು ವಿಧಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಹೆಚ್ಚಿನ

ಶುಲ್ಕವನ್ನು ವಿಧಿಸಿದ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ಮಾಹಿತಿ ನೀಡಿದಲ್ಲಿ, ಆ ಸಂಸ್ಥೆಗಳ ವಿರುದ್ಧ ಕ್ರಮವಹಿಸಲಾಗುವುದು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸುತ್ತೋಲೆ ಸಂಖ್ಯೆ:RGU/SWF/Misc-174/Circular/2017-18, Dated:07.02.2018 ಮತ್ತು ಸಂಖ್ಯೆ:RGU/AFF/MED/GEN/HOS/2022-23, dated:29-07-2022ರಲ್ಲಿ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ವಸತಿ ನಿಲಯದ ಸೌಲಭ್ಯವನ್ನು ಕಡ್ಡಾಯವಾಗಿ ಪಡೆಯಬೇಕೆಂದು ಒತ್ತಾಯಿಸುವಂತಿಲ್ಲವೆಂದು ಹಾಗೂ ಸದರಿ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳಿಗೆ ತಪ್ಪಿದ್ದಲ್ಲಿ ಗಂಭೀರವಾಗಿ ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸಲಾಗುವುದೆಂದು ಸೂಚಿಸಿ, ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಸುತ್ತೋಲೆಯನ್ನು ಹೊರಡಿಸಲಾಗಿದೆ.

**ಸಂಖ್ಯೆ:** ಎಂಇಡಿ 591 ಎಂಎಸ್ಎಫ್ 2023

**(ಡಾ: ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು